# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ★ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ: 10.02.2017

## ಪ್ರಕಟಣೆ ಕೃಪೆಗಾಗಿ

ಮೈಸೂರು ನಗರದ ಬಿ ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಿಂದ ಲಾಲಾ ಲಜಪತ್‌ರಾಯ್ ರವರ 151 ನೇ ಜಯಂತಿ ಮಹೋತ್ಸವದ ಪ್ರಯುಕ್ತ ಏರ್ಪಡಿಸಲಾಗಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಟಿ ಎನ್ ರಾಮಕೃಷ್ಣ, ಮುಖ್ಯ ಸಂಘಟಕರು, ರಾಷ್ಟ್ರೀಯ ಗೌರವ ಸಂರಕ್ಷಣ ಪರಿಷತ್, ಬೆಂಗಳೂರು ರವರು ಮಾತನಾಡುತ್ತಾ ಭಾರತವನ್ನಾಳಿದ ಐತಿಹಾಸಿಕ ರಾಜವಂಶಗಳ ವೈಭವ, ಅವರು ನಮ್ಮ ನಾಡಿಗೆ ನೀಡಿರುವ ಕೊಡುಗೆಗಳು. ನಂತರ ನಮ್ಮ ದೇಶಕ್ಕೆ ಬ್ರಿಟೀಷರ ಆಗಮನ ಅವರ ಒಡೆದು ಆಳುವ ನೀತಿ, ಬ್ರಿಟೀಷರನ್ನು ದೇಶದಿಂದ ಹೊರಗಟ್ಟಲು ಹೋರಾಡಿದ ರಾಜ ಮಹಾರಾಜರುಗಳ ತ್ಯಾಗ ಬಲಿದಾನಗಳು ಲಕ್ಷಾಂತರ ದೇಶ ಪ್ರೇಮಿಗಳ ಸಾವು ನೋವುಗಳು ಮತ್ತು ಭಾರತೀಯರ ಶೋಚನೀಯ ಪರಿಸ್ಥಿತಿಯ ಬಗ್ಗೆ ವಿವರಿಸಿದರು. ಸ್ವಾತಂತ್ರ ಹೋರಾಟಗಾರರಾದ ಪಂಜಾಬಿನ ಸಿಂಹ, ದೇಶಪ್ರೇಮಿ ಲಾಲಾ ಲಜಪತ್ ರಾಯ್ ರವರು ನಡೆಸಿದ ಸ್ವಾತಂತ್ರ ಹೋರಾಟ, ಅವರು ಯುವಕರಲ್ಲಿ ಮೂಡಿಸಿದ ದೇಶಪ್ರೇಮ, ತ್ಯಾಗ ಬಲಿದಾನದ ಬಗ್ಗೆ ಸವಿಸ್ಥಾರವಾಗಿ ವಿವರಿಸಿ ರಾಯ್ ರವರು ಹಾಗೂ ಭಗತ್‌ಸಿಂಗ್‌ರ ಬಗ್ಗೆ ಪಿಪಿಟಿ ಜೊತೆಗೆ ಸ್ವಾತಂತ್ರ ಹೋರಾಟಗಾರರ ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪರವರು ಸ್ವಾಗತಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್ ಬಿ ನಾಗರಾಜಮೂರ್ತಿ ರವರು ವಂದಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆರ್ ಸುಜಾತಕುಮಾರಿ ರವರು ನಿರೂಪಿಸಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಬೋಧಕ ಬೋಧಕೇತರರು ಹಾಜರಿದ್ದರು.

ಪ್ರಾಂಶುಪಾಲರು

(ಪ್ರೊ ಎಂ ಮಹದೇವಪ್ಪ)

ಪ್ರಾಂಶುಪಾಲರು

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಊಟಿ ರಸ್ತೆ, ಮೈಸೂರು-25

ಗೆ

ಸಂಪಾದಕರು

---------------

---------------

ಮೈಸೂರು